ಅಧ್ಯಕ್ಷರು.—ಮಾನ್ಯ ರಾಮಸ್ವಾಮಿಯವರು ಏನು ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನು ಈ ಸದನಕ್ಕೆ ಒಂದು ಗಂಟೆ ಮುಂಚೆ ಬಂದು ನನ್ನ ಚೇಂಬರಿನಲ್ಲಿರುತ್ತೇನೆ. ಆಗ ಮಾನ್ಯ ಸದಸ್ಯರಲ್ಲಿ ಯಾರು ಬೇಕಾದರೂ ಬರಬಹುದು ಮತ್ತು ಇಂತಿಂತಹ ವಿಚಾರಗಳು ಬರಲಿಲ್ಲ ಉಳಿದಿವೆ ಎಂದರೆ ಇದರ ಬಗ್ಗೆ ರಿಕಾರ್ಡುಗಳನ್ನು ತರಿಸಿ ನೋಡಲು ನನಗೂ ಸಹಾಯವಾಗುತ್ತದೆ. ಆದರೆ ಆ ರೀತಿ ಒಬ್ಬ ಸದಸ್ಯರು ಅಲ್ಲಿಗೆ ಬರದೆ ಇಲ್ಲಿ ಹಠಾತ್ತನೆ ಎದ್ದುನಿಂತು ಹೇಳುವುದಾದರೆ ನಾನೇನು ಮಾಡಲು ಸಾಧ್ಯ ? ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಶರಣಪ್ಪ.—ನಾನು ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ತಮ್ಮ ಕಡೆಗೆ ಒಂದು ನೋಟೀಸನ್ನು ಕಳುಹಿಸಿದ್ದೆ. ಇದರ ಬಗ್ಗೆ ಸರಕಾರದ ವಿವರಗಳು ಇನ್ನೂ ಬರಲಿಲ್ಲ.

ಅಧ್ಯಕ್ಷರು.—ಇದನ್ನು ನೋಡುತ್ತೇನೆ.

Replies due to Questions etc.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕಳೆದ ಎರಡು ಮೂರು ದಿನಗಳಿಂದಲೂ ನನ್ನ ಪ್ರಶ್ನೆಗಳ ಬಗ್ಗೆ ಇನ್ನೂ ಸರಕಾರ ಉತ್ತರ ತರಿಸಿಕೊಡಲಾಗಲಿಲ್ಲ. ನಾನು ಈ ಪ್ರಶ್ನೆಗಳನ್ನು ಕಳುಹಿಸಿ ಸುಮಾರು ಒಂಬತ್ತು ತಿಂಗಳಾದರೂ ಇದುವರೆಗೆ ಸರಕಾರ ಉತ್ತರ ಕೊಡುವ ಮನಸ್ಸು ಮಾಡಲಿಲ್ಲ. ಇವೆಲ್ಲಾ ಬಹು ಮುಖ್ಯವಾದ ಪ್ರಶ್ನೆಗಳು. ಬೆಂಗಳೂರು ವಾಟರು ಸಪ್ಲೇಜ್ ಬೋರ್ಡಿನ ಪ್ರಶ್ನೆ ಕಳುಹಿಸಿದ್ದೆ, ಉತ್ತರ ಬರಲಿಲ್ಲ ಕಂಬೈನ್ಡ್ ಬಿಲ್ಡಿಂಗುಗಳ ಬಗ್ಗೆ ಪ್ರಶ್ನೆ ಕಳಿಸಿದ್ದೆ, ಉತ್ತರ ಬರಲಿಲ್ಲ. ಹೇಮಾವತಿ ಯೋಜನೆ ಟೆಂಡರುಗಳ ಬಗ್ಗೆ ಪ್ರಶ್ನೆ ಕಳುಹಿಸಿದ್ದೆ, ಉತ್ತರ ಬರಲಿಲ್ಲ ಹೀಗೆ ಕೆಲವು ಪ್ರಮುಖವಾದಂತಹ ಪ್ರಶ್ನೆಗಳು ಎಂದರೆ ಬರಗಾಲದಲ್ಲಿ ಕೆಲವು ಕಡೆ ಮೆಷಿನರಿಗಳನ್ನು ತರಿಸಿರುವುದರ ಬಗ್ಗೆ ಪ್ರಶ್ನೆ ಕಳಿಸಿದ್ದೆ. ಇನ್ನು ಮೂರು ದಿನಗಳಲ್ಲಿ ನಮ್ಮ ಸದನದ ಕಾರ್ಯ ಕಲಾಪಗಳು ಮುಗಿಯುತ್ತವೆ. ಸಾಧ್ಯಾಶಃ ನಮ್ಮ ಸರ್ಕಾರಕ್ಕೆ ಇದನ್ನು ಬರುವ ಬಜೆಟ್ಟಿನ ಅಧಿವೇಶನದಲ್ಲಿ ತರಿಸಬೇಕೆಂದು ಇದ್ದಾರೋ ಏನೋ ಗೊತ್ತಿಲ್ಲ. ಇದರ ಬಗ್ಗೆ ನಾನೂ ಕೂಡ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ ಎಂದಿದ್ದೆ. ಆದರೂ ಇಲ್ಲಿ ಹೇಳಬೇಕಾಗಿ ಬಂತು. ಮತ್ತು ಇದನ್ನು ಮನಸ್ಸಿಲ್ಲದ ಮನಸ್ಸಿನಿಂದ ಹೇಳುತ್ತಿದ್ದೇನೆ.

Sri D. DEVARAJ URS.—Alright. I will see all these things are attended to.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೂಡ ಈ ಮಂತ್ರಿ ಮಂಡಲದಲ್ಲಿ ನಾಲ್ಕೈದು ಜನರನ್ನು ಕೈಬಿಟ್ಟಿದ್ದರ ಬಗ್ಗೆ ಸರಕಾರದ ಹೇಳಿಕೆ ಬೇಕೆಂದು ಪ್ರಶ್ನೆ ಕಳುಹಿಸಿದ್ದೆ. ಇನ್ನೂ ಉತ್ತರ ಬರಲಿಲ್ಲ.

Reported speech of the C.M. at Bijapur

ಶ್ರೀ ಎಸ್. ಬಂಗಾರಪ್ಪ.—ನಾನು ರೂಲ್ 146 ಪ್ರಕಾರ ನನ್ನ ಒಂದು ನೋಟೀಸನ್ನು ರುಜು ಹಾಕಿ ಇತರ ಸದಸ್ಯರ ರುಜುವಿನೊಡನೆ ತಮಗೆ ಕಳುಹಿಸಿದ್ದೇನೆ. ಇವು ಮಾನ್ಯ ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಭಾಷಣ ಮಾಡಿದುದರ ಬಗ್ಗೆ.

ಶ್ರೀ ಡಿ. ದೇವರಾಜ ಅರಸ್.—ಇದು ಆಗಲೇ ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಆಗಲೇ ಇಲ್ಲೂ ಹೇಳಿಯಾಗಿದೆ, ಆ ಸದನದಲ್ಲೂ ಹೇಳಿಯಾಗಿದೆ.

ಅಧ್ಯಕ್ಷರು.—ಇದರ ಬಗ್ಗೆ ಆಗಲೇ ಉತ್ತರ ಕೊಡಲಾಗಿದೆ. ಮತ್ತೆ ಇದರ ಬಗ್ಗೆ ಏಕೆ ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಒಂದು ಸಾರಿಯಲ್ಲ. ಅದರ ಬಗ್ಗೆ ನಾಲ್ಕು ಸಾರಿ ಹೇಳಿಯಾಗಿದೆ.